**ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಶ್ರೀ ಕೆ.ಎ.ತಿಪ್ಪೇಸ್ವಾಮಿ, ಇವರು ನಿಯಮ-72ರ ಅಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಉತ್ತರ**

**ಸೂಚನಾ ವಿಷಯ**

**ಪ್ರಶ್ನೆ :**

ಲೋಕೋಪಯೋಗಿ ಇಲಾಖೆಯಡಿಯಲ್ಲಿ ಬರುವ ರಸ್ತೆಗಳನ್ನು ವಿವಧ ಲೆಕ್ಕ ಶೀರ್ಷಿಕೆಯಡಿಯಲ್ಲಿ ಅಂದರೆ ಪ್ರತಿ ವರ್ಷದ ಆಯವ್ಯಯದಲ್ಲಿ ಒದಗಿಸುವ ಅನುದಾನದಡಿ ಮತ್ತು ಕೇಂದ್ರ ಸರ್ಕಾರವು CRF ಅಡಿ ಒದಗಿಸುವ ಅನುದಾನದಲ್ಲಿ ಅಭಿವೃದ್ಧಿ ಮತ್ತು ಸುಧಾರಣೆ ಕೈಗೊಳ್ಳಲಾಗುತ್ತಿದೆ. ಅದರಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಡಿ ಬರುವ ರಸ್ತೆ ಜಾಲವನ್ನು ರಾಜ್ಯ ಸರ್ಕಾರದ CMGRY, SDP, SCP, TSP ಮತ್ತು ಕೇಂದ್ರ ಸರ್ಕಾರದ PMGSY ಮುಂತಾದ ಯೋಜನೆಯಡಿ ಅಭಿವೃದ್ಧಿ ಮತ್ತು ಸುಧಾರಣೆ ಕೈಗೊಳ್ಳಲಾಗುತ್ತಿದೆ. ಆದರೆ ರಾಜ್ಯದಲ್ಲಿ ಇತ್ತೀಚೆಗೆ ಹೆಚ್ಚುತ್ತಿರುವ ವಾಹನದ ಸಾಂದ್ರತೆ ಮತ್ತು ಕಿರಿದಾದ ರಸ್ತೆಗಳನ್ನು ಹಲವಾರು ದಶಕಗಳಿಂದ ಅಗಲೀಕರಣ ಮಾಡದೇ ಇರುವುದರಿಂದ ಲೋಕೋಪಯೋಗಿ ರಸ್ತೆಗಳು ಮತ್ತು ಗ್ರಾಮೀಣ ರಸ್ತೆಗಳ ಜಾಲ ಒಳಗೊಂಡಂತೆ ವಿವಧ ರಸ್ತೆಗಳಲ್ಲಿ ಗುಂಡಿಗಳು ವಾಹನ ಸಂಚಾರಕ್ಕೆ ಅಡ್ಡಿಯಾಗುವುದಲ್ಲದೆ ಪ್ರತಿನಿತ್ಯ ಅನೇಕ ಅಡಚಣೆಗಳು ಸಂಭವಿಸುತ್ತಿವೆ.ಈ ಮೇಲಿನ ಹಿನ್ನೆಲೆಯಲ್ಲಿ ರಾಜ್ಯದ ರಸ್ತೆ ಚಾಲನೆ ಸುಧಾರಣೆ ಬಗ್ಗೆ ಸರ್ಕಾರವು NABARD ನ RIDF ಯೋಜನೆಯಡಿಯಲ್ಲಿ ಹಲವಾರು ರಸ್ತೆಗಳನ್ನು ಸುಧಾರಣೆಗೊಳಿಸುವ ಕ್ರಮ ಕೈಗೊಳ್ಳುತ್ತಿದೆ.2019-20ನೇ ಸಾಲಿನಲ್ಲಿ ರಸ್ತೆ ಅಭಿವೃದ್ಧಿಗೆ 300 ಕೋಟಿ ರೂ. ಒಳಗೊಂಡಂತೆ ಒಟ್ಟು 1500 ಕೋಟಿ ರೂಗಳಿಗೆ ಅನುಮೋದನೆ ನೀಡಿ NABARD ಗೆ ಮಂಜೂರಾತಿಗೆ ಕಳುಹಿಸಲಾಗಿದೆ. ಆದರೆ ಇತ್ತೀಚಿನ ಮಾಹಿತಿ ಪ್ರಕಾರ NABARD ಸಂಸ್ಥೆಯು ಲೋಕೋಪಯೋಗಿ ಮತ್ತು RDPR ಇಲಾಖೆಯಡಿ ರಸ್ತೆ ಅಭಿವೃದ್ಧಿಗೆ ಶಿಫಾರಸ್ಸು ಮಾಡಿದ 480 ರೂ ಕೋಟಿಗಳ ಅನುದಾನವನ್ನು ಬೇರೆ ಇಲಾಖೆಗಳಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸೂಚಿಸಿದೆ ಎಂದು ತಿಳಿದುಬಂದಿದೆ. ಇದರಿಂದಾಗಿ ಅತಿ ಅವಶ್ಯವಾಗಿ ರಸ್ತೆ ದುರಸ್ತಿ ಮತ್ತು ರಸ್ತೆ ನಿರ್ವಹಣೆ ಅನುದಾನವಿಲ್ಲದೆ ರಸ್ತೆ ಸುಧಾರಣೆಯಾಗದೆ, ರಸ್ತೆಗಳ ಸ್ಥಿತಿ ಹದಗೆಟ್ಟು ಸಾರ್ವಜನಿಕರಿಗೆ ತೊಂದರೆ ಆಗಿರುವುದರ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಗಳು, ಹಾಗೂ ಲೋಕೋಪಯೋಗಿ ಮತ್ತು ಸಮಾಜ ಕಲ್ಯಾಣ ಸಚಿವರ ಗಮನ ಸೆಳೆಯ ಬಯಸುತ್ತೇನೆ.

******

**ಸರ್ಕಾರದ ಉತ್ತರ :**

2019-20ನೇ ಸಾಲಿನಲ್ಲಿ ಅಸ್ತಿತ್ವದಲ್ಲಿ ಇದ್ದ ಸಚಿವ ಸಂಪುಟ ಉಪ ಸಮಿತಿಯು ದಿನಾಂಕ 09-01-2019ರ ಸಭೆಯಲ್ಲಿ ವಿವಿಧ ಇಲಾಖೆಗಳಿಗೆ ಆರ್‌ಐಡಿಎಫ್-25ರಡಿ ಹೊಸ ಕಾಮಗಾರಿಗಳನ್ನು ನಬಾರ್ಡ್ ಸಂಸ್ಥೆಗೆ ಪ್ರಸ್ತಾಪಿಸಲು ಒಟ್ಟು 1500.00 ಕೋಟಿ ಮೊತ್ತದ ವಲಯವಾರು ಹಂಚಿಕೆಯನ್ನು ಮಾಡಿರುತ್ತದೆ. ಈ ಹಂಚಿಕೆಯಲ್ಲಿ ಲೋಕೋಪಯೋಗಿ ಇಲಾಖೆಗೆ 300.00 ಕೋಟಿ ರೂ. ಮೊತ್ತ ಹಂಚಿಕೆಯಾಗಿದ್ದು, ಈ ಮೊತ್ತಕ್ಕೆ ಕ್ರಿಯಾ ಯೋಜನೆಯನ್ನು ಸಹ ಅಂತಿಮಗೊಳಿಸಿ, ಕಾಮಗಾರಿಗಳಿಗೆ ಅಂದಾಜುಪಟ್ಟಿಗಳನ್ನು ಸಹ ಜುಲೈ-19ರ ಮಾಹೆಯಲ್ಲಿ ನಬಾರ್ಡ್ ಸಂಸ್ಥೆಗೆ ಅನುಮೋದನೆಗೆ ಸಲ್ಲಿಸಲಾಗಿತ್ತು.

ಆದರೆ 2019ರ ಆಗಸ್ಟ್ ಮಾಹೆಯಲ್ಲಿ ರಾಜ್ಯದಲ್ಲಿ ಪ್ರಕೃತಿ ವಿಕೋಪದಿಂದ ಹೆಚ್ಚಿನ ಮಳೆಯ ಪ್ರಮಾಣ ಹಾಗೂ ಅನೇಕ ನದಿಗಳ ಪಾತ್ರದಲ್ಲಿ ಸಂಭವಿಸಿದ ನೆರೆಯಿಂದಾಗಿ ಅಪಾರ ಪ್ರಮಾಣದಲ್ಲಿ ಆಸ್ತಿ ಹಾನಿ ಉಂಟಾಗಿದ್ದು, ಇದರಲ್ಲಿ ಪ್ರಮುಖವಾಗಿ ಶಾಲಾ ಕಟ್ಟಡಗಳು ಮತ್ತು ಅಂಗನವಾಡಿ ಕಟ್ಟಡಗಳು ಒಳಗೊಂಡಿವೆ. ಈ ರೀತಿ ಹಾನಿಗೊಂಡ ಶಾಲಾ ಕಟ್ಟಡಗಳ ಮರುನಿರ್ಮಾಣ ಕಾಮಗಾರಿಗಳನ್ನು ಆದ್ಯತೆ ಮೇಲೆ ಕೈಗೊಳ್ಳಲು ನಿರ್ಧರಿಸಲಾಯಿತು. ಅದರಂತೆ ನಬಾರ್ಡ್ ಸಂಸ್ಥೆಯಿಂದ 2019-20ನೇ ಸಾಲಿನಲ್ಲಿ ರೂ. 975.03 ಕೋಟಿ

ಮೊತ್ತದ ಪಶುಸಂಗೋಪನೆ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ (ಅಂಗನವಾಡಿ ಕಟ್ಟಡಗಳು) ಮತ್ತು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ (ಶಾಲಾ ಕೊಠಡಿಗಳು) ಕಾಮಗಾರಿಗಳು ಅನುಮೋದನೆಯಾಗಿದೆ. ಇದರಿಂದ ರಾಜ್ಯಕ್ಕೆ ನಬಾರ್ಡ್ ಸಂಸ್ಥೆಯು 2019-20ನೇ ಸಾಲಿಗೆ ನೀಡುವ ಸಾಲ ಸಹಾಯದ ಮೊತ್ತ ಪೂರ್ಣಗೊಂಡಿದ್ದು, ಈ ಹಿಂದೆ 2019-20ನೇ ಸಾಲಿಗೆ ಹಂಚಿಕೆಯಾಗಬಹುದಾದ normative allocation ಎದುರಾಗಿ ಕಳುಹಿಸಲಾಗಿರುವ 1500 ಕೋಟಿ ರೂ. ಮೊತ್ತದ ಕ್ರಿಯಾ ಯೋಜನೆಗಳಡಿ ಪ್ರಸ್ತಾಪಿಸಿದ್ದ ಬಹುತೇಕ ಇಲಾಖೆಯ ಕಾಮಗಾರಿಗಳಿಗೆ ಅನುಮೋದನೆ ದೊರಕಿರುವುದಿಲ್ಲ.

ಲೋಕೋಪಯೋಗಿ ಇಲಾಖೆಯಡಿ 2019-20ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ-3054ರಡಿ ರಾಜ್ಯ ಹೆದ್ದಾರಿಗಳ ನಿರ್ವಹಣೆ-335.17 ಕೋಟಿ ರೂ.ಗಳು ಜಿಲ್ಲಾ ಮತ್ತು ಇತರೆ ರಸ್ತೆಗಳ ನಿರ್ವಹಣೆ-355.94 ಕೋಟಿ ರೂ.ಗಳು, ಅನುದಾನ ಹಂಚಿಕೆಯಾಗಿರುತ್ತದೆ. 43000 ಕಿಮೀ ಉದ್ದದ ರಸ್ತೆಗಳಲ್ಲಿ ಗುಂಡಿಗಳನ್ನು ಮುಚ್ಚುವ ಕಾರ್ಯವನ್ನು ಪೂರ್ಣಗೊಳಿಸಿ, ಸುಗಮ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗಿದೆ.

ಇನ್ನುಳಿದಂತೆ ರಸ್ತೆಗಳ ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮ/ಯೋಜನೆಗಳು ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿದ್ದು, ವಾಹನ ಸಾಂದ್ರತೆ ಮತ್ತು ಅವಶ್ಯಕತೆಗೆ ಅನುಸಾರವಾಗಿ ರಸ್ತೆಗಳ ಅಗಲೀಕರಣ, ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

(ಗೋವಿಂದ ಎಂ. ಕಾರಜೋಳ)
ಉಪ ಮುಖ್ಯ ಮಂತ್ರಿಗಳು ಹಾಗೂ
ಲೋಕೋಪಯೋಗಿ ಸಚಿವರು

ಸಂಖ್ಯೆ; ಪಿಡಬ್ಲ್ಯುಡಿ: 11: ಆರ್‌ಡಿಎಫ್: 2020